# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1168(1187) |
| ಮಾನ್ಯ ಸದಸ್ಯರ ಹೆಸರು | : | ಡಾ. ಯತೀಂದ್ರ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18.03.2025 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ನಗರಪಾಲಿಕೆ/ ನಗರಸಭೆ/ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿನ ಕಂದಾಯ ನಿವೇಶನ ಮತ್ತು ಬಡಾವಣೆಗಳಲ್ಲಿ ನಿರ್ಮಿತವಾದ ಮನೆಗಳಿಗೆ "ಬಿ" ಖಾತಾ ನೀಡಲು ಆದೇಶವಾಗಿದ್ದು ಸರಿಯಷ್ಟೆ; ಇದರಿಂದ ಲಕ್ಷಾಂತರ ಕುಟುಂಬಗಳಿಗೆ ಅನುಕೂಲವಾಗಿರುವುದು ನಿಜವೇ: | ಹೌದು.<br>ಇ-ಆಸ್ತಿ ತಂತ್ರಾಂಶ ಬಳಕೆ ಮಾಡಿ ಖಾತಾ ನೀಡಲಾಗುತ್ತಿದೆ. ಖಾತಾ ಪ್ರಕ್ರಿಯೆಗೆ ಇ-ಆಸ್ತಿ ಮತ್ತು ನೋಂದಣಿಗಾಗಿ ಇರುವ ಕಾವೇರಿ ತಂತ್ರಾಂಶ ಜೋಡಣೆ ಮಾಡಿರುವುದರಿಂದ ನೋಂದಣಿ ಪ್ರಕ್ರಿಯೆಗೆ ಅಥವಾ ಹಕ್ಕು ವರ್ಗಾವಣೆಗೆ ಯಾವುದೇ ಭೌತಿಕ ಖಾತಾ ದಾಖಲೆ ಹಾಗೂ ನೋಂದಾಯಿತ ಪತ್ರಗಳ ಅವಶ್ಯಕತೆ ಇರುವುದಿಲ್ಲ. ತಂತ್ರಾಂಶದಲ್ಲಿ ಸೃಜಿಸಿದ ಖಾತೆಗಳಲ್ಲಿ ಸಕ್ಷಮ ಅಧಿಕಾರಿಯ ಡಿಜಿಟಲ್ ಸಹಿ ಇರುವುದರಿಂದ ನಕಲು ಮಾಡಲು ಸಾಧ್ಯವಿರುವುದಿಲ್ಲ. |
| (ಆ) | "ಬಿ' ಖಾತಾ ದಾಖಲಾತಿಗಳಿಗೆ ಬ್ಯಾಂಕ್ ಗಳಲ್ಲಿ ಸಾಲ ಸಿಗದ ಕಾರಣ ಮಾಲೀಕರುಗಳು ಖಾಸಗಿಯಾಗಿ ಪಡೆಯುವ ಸಾಲಕ್ಕೆ ಹೆಚ್ಚುವರಿ ಬಡ್ಡಿಯನ್ನು ಪಾವತಿಸಬೇಕಾದ ಅನಿವಾರ್ಯತೆಯಿದ್ದು. ಬಡ ಮತ್ತು ಮಧ್ಯಮ ವರ್ಗದ ಜನರಿಗೆ ತೊಂದರೆಯಾಗಿರುವುದನ್ನು ಸರ್ಕಾರ ಗಮನಿಸಿದೆಯೇ: | ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಇರುವ ಬಡಾವಣೆಗಳಲ್ಲಿನ ಸ್ವತ್ತುಗಳನ್ನು "ಬಿ" ರೆಜಿಸ್ಟರದಲ್ಲಿ ದಾಖಲಿಸಿ ಇ-ಖಾತಾ ನೀಡಲಾಗುತ್ತದೆ. ಸಾಲ ನೀಡುವ ಪ್ರಾಧಿಕಾರಗಳು ಸಾಲ-ಸೌಲಭ್ಯ ಒದಗಿಸುವಾಗ ಅವಶ್ಯವಿರುವ ದಾಖಲೆಗಳನ್ನು ಪರಿಶೀಲಿಸುವ ಪ್ರಾಧಿಕಾರಿಗಳಾಗಿದ್ದು, ಈ ಬಗ್ಗೆ ಸಂಬಂಧಿಸಿದ ಪ್ರಾಧಿಕಾರಗಳು ತೀರ್ಮಾನ ಮಾಡಬೇಕಾಗುತ್ತದೆ. |
| (ಇ) | "ಬಿ" ಖಾತಾ ದಾಖಲಾತಿ ಹೊಂದಿದ ನಿವೇಶನ ಮತ್ತು ಮನೆಗಳಿಗೆ ಸಹ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ನೀಡುವ ಬಗ್ಗೆ ಆದೇಶ ಹೊರಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ. ಇದ್ದಲ್ಲಿ ಯಾವಾಗ ಜಾರಿ ತರಲಾಗುವುದು? | ಪ್ರಸ್ತುತ ಇರುವುದಿಲ್ಲ. |

ಕಡತ ಸಂಖ್ಯೆ: ನಅಇ 79 ಜಿಇಎಲ್ 2025

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು